ಭಗವಂತನು ರುಕ್ಮಿಣಿಗೆ ಸೀತೆಯ ಆಕಾರವನ್ನು ಧರಿಸುವಂತೆ ಕೇಳಿಕೊಂಡನು. ಇಲ್ಲದಿದ್ದರೆ ಹನುಮಂತನಿಗೆ ಸಮಾಧಾನವಾಗುವುದಿಲ್ಲ ಎಂದು ಕೃಷ್ಣನಿಗೆ ಗೊತ್ತಿತ್ತು. ನಿಷ್ಠಾಭಕ್ತಿಯೆನ್ನುವುದು ಈ ಬಗೆಯದು.

**ವಿರಹ ಮತ್ತು ಮಹಾಭಾವ:** ಭಗವಂತನಿಂದ ಬೇರೆಯಾದಾಗ ಅಂತರಂಗದಲ್ಲಿ ಉಂಟಾಗುವ ಗುರುತರವಾದ ವ್ಯಥೆಯನ್ನೇ 'ವಿರಹ' ಎನ್ನುತ್ತಾರೆ. ರೂಪ ಮತ್ತು ಸನಾತರು (ಶ್ರೀಚೈತನ್ಯರ ಶಿಷ್ಯರು) ಆ ಭಾವದಲ್ಲಿಯೇ ಮರದ ಕೆಳಗೆ ಕುಳಿತಾಗ, ಆ ಮರದ ಎಲೆಗಳೆಲ್ಲಾ ಒಣಗಿಹೋದವೆಂದು ಹೇಳುತ್ತಾರೆ. ಆ ಭಾವದಲ್ಲಿ ಇದ್ದಾಗ ಶ್ರೀರಾಮಕೃಷ್ಣರು ಸುಮಾರು ಮೂರು ದಿನಗಳ ಕಾಲ ಪ್ರಜ್ಞೆ ಇಲ್ಲದೆ ಇದ್ದರು. ಆಗ ಅವರಿಗೆ ಸಂಚರಿಸುವುದಕ್ಕೂ ಆಗುತ್ತಿರಲಿಲ್ಲ. 'ಮಹಾಭಾವ'ವೆಂದರೆ ಅತ್ಯಂತ ಶ್ರೇಷ್ಠವಾದ ಭಗವದನುಭವ. ಇದ ರಿಂದ ದೇಹ ಮತ್ತು ಮನಸ್ಸಿನ ಮೇಲೆ ದೊಡ್ಡ ಬದಲಾವಣೆಯೇ ಆಗುವುದು.

**ಭಕ್ತಿ ಮತ್ತು ಜ್ಞಾನ:** ಭಕ್ತಿ ಮತ್ತು ಜ್ಞಾನ ಅಂತ್ಯದಲ್ಲಿ ಒಂದೇ ಆಗಿ ಪರಿಣಮಿಸುವುದು. ಕಡೆಯ ಘಟ್ಟದಲ್ಲಿ, ಶುದ್ಧ ಭಕ್ತಿ ಮತ್ತು ಶುದ್ಧ ಜ್ಞಾನ ಎರಡೂ ಒಂದೇ. ಯಾರನ್ನು ವೇದಾಂತಿಗಳು 'ಬ್ರಹ್ಮ'ನೆನ್ನುವರೋ, ಅವನನ್ನೇ ಯೋಗಿಗಳು 'ಆತ್ಮ' ಎನ್ನುವರು; ಭಕ್ತರು 'ಭಗವಂತ'ನೆನ್ನುವರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಒಬ್ಬನೇ ಬ್ರಾಹ್ಮಣ, ಪೂಜೆ ಮಾಡುವಾಗ ಪೂಜಾರಿಯೆಂದೂ, ಅಡಿಗೆ ಮಾಡುವಾಗ ಅಡುಗೆಯವನೆಂದೂ ಕರೆಸಿಕೊಳ್ಳುತ್ತಾನೆ" ಎಂದು.

" 'ಹೇ ದೇವರೆ, ನೀನೊಬ್ಬನೇ ಪ್ರಪಂಚದಲ್ಲಿ ಕರ್ತೃ. ನಾನೊಂದು ಸಣ್ಣ ಯಂತ್ರ ನಿನ್ನ ಕೈಯಲ್ಲಿ. ಯಾವುದೂ ನನ್ನದಲ್ಲ, ಸರ್ವವೂ ನಿನ್ನದು' ಎನ್ನುವವನು ಜ್ಞಾನಿ. ಯಾರಿಗೆ ಹರಿನಾಮೋಚ್ಚಾರಣೆಯಿಂದ ಕಂಬನಿದುಂಬಿ ರೋಮಾಂಚನವಾಗುವುದೊ, ಭಗವಂತನ ಮಧುರನಾಮವನ್ನು ಕೇಳಿದೊಡನೆಯೆ, ಯಾರ ಕಣ್ಣಿನಿಂದ ನೀರು ಸುರಿಯುವುದೊ, ಯಾರ ಕೂದಲು ಎದ್ದು ನಿಲ್ಲುವುದೊ, ಅವನೇ ನಿಜವಾಗಿ ಜ್ಞಾನಸಿದ್ಧ."

ಈ ರೀತಿಯಾಗಿ ಹಲವಾರು ವಿಧಾನಗಳಿಂದ ಶ್ರೀರಾಮಕೃಷ್ಣರು 'ಭಕ್ತಿಯೋಗ'ವನ್ನು ಉಪದೇಶಿಸಿದ್ದಾರೆ. ಇದರಲ್ಲಿ ಎಲ್ಲ ಶಾಸ್ತ್ರಗಳ ಸಾರಭೂತ ತತ್ತ್ವವು ಅಡಗಿರುವುದನ್ನು ನಾವು ಕಾಣಬಹುದು.

## ಭಕ್ತನ ಭಾವನೆ ಹೇಗಿರಬೇಕು?

ಒಂದು ಸಲ ಪೂಜೆಯ ವಿಚಾರವಾಗಿ ಕೇಶವಚಂದ್ರಸೇನ ಮತ್ತು ಆತನ ಅನುಯಾಯಿಗಳಿಗೆ ಶ್ರೀಗುರುದೇವರು ಹೀಗೆ ಹೇಳಿದರು: "ದೇವರ ಶಕ್ತಿ ಮಹಿಮೆಯ ಮೇಲೆ ಏತಕ್ಕೆ ಅಷ್ಟೊಂದು ನೀವು ಆಲೋಚಿಸುವಿರಿ? ತಂದೆಯ ಎದುರಿಗೆ ಕುಳಿತುಕೊಂಡಿರುವ ಮಗನು, 'ನನ್ನ ತಂದೆಗೆ ಅಷ್ಟೊಂದು ಮನೆಗಳಿವೆ, ಕುದುರೆಗಳಿವೆ, ಹಸುಗಳಿವೆ' ಎಂದು ಆಲೋಚಿಸುವನೇನು? ನಾವೆಲ್ಲ ದೇವರ ಮಕ್ಕಳು. ಅವನು ನಮ್ಮನ್ನು ಸುರಕ್ಷಿತವಾಗಿ ಇಟ್ಟಿರುವನು. ಇದರಲ್ಲಿ ಆಶ್ಚರ್ಯವೇನು? ಆದಕಾರಣ ನಿಜವಾದ ಭಕ್ತ ಈ ವಿಚಾರವನ್ನು ಕುರಿತು ಆಲೋಚಿಸುವುದನ್ನು ಬಿಟ್ಟು ಅವನೊಂದಿಗೆ ಅತಿನಿಕಟ ಸಂಬಂಧವನ್ನು ಬೆಳೆಸಬೇಕು. ಅವನನ್ನು ತನ್ನ ಆಪ್ತನನ್ನಾಗಿ ಮಾಡಿಕೊಳ್ಳಬೇಕು. ಅವನನ್ನು ಬೇಡಿಕೊಳ್ಳಬೇಕು. ಅವನ ವಿಚಾರವಾಗಿ ಹೆಮ್ಮೆ ಪಡಬೇಕು. ಪ್ರಾರ್ಥನೆಯಿಂದ ಅವನನ್ನು ಬಲಾತ್ಕಾರ ಮಾಡಬೇಕು. ನನ್ನ ಪ್ರಾರ್ಥನೆಯನ್ನು ಈಡೇರಿಸಬೇಕು ಮತ್ತು ನೀನು ನನಗೆ ಮೈದೋರಬೇಕು ಎಂದು ಬೇಡಬೇಕು. ನೀವು ಅವನನ್ನು ಒಂದು ಅದ್ಭುತ ವ್ಯಕ್ತಿಯೆಂದು ಆಲೋಚಿಸುತ್ತಿದ್ದರೆ, ನೀವು ಅವನನ್ನು ನಿಮ್ಮ ಅತಿ ನಿಕಟ ಸಂಬಂಧಿ ಎಂದು ತಿಳಿಯುವುದಕ್ಕೆ ಆಗುವುದಿಲ್ಲ. ಆಗ ಆತನನ್ನು ಬಲಾತ್ಕರಿಸುವುದಕ್ಕಾಗುವುದಿಲ್ಲ. 'ಓ ಅವನೆಷ್ಟು ಮಹಿಮಾವಂತನು. ನಮ್ಮಿಂದ ಎಷ್ಟು ದೂರದಲ್ಲಿರುವನು!' ಎಂಬ ಭಾವನೆ ಬರುವುದು. ನಿಮಗೆ ಸಾಧ್ಯವಾದ ಮಟ್ಟಿಗೆ ಅವನು ನಿಮ್ಮವನೆಂದು ತಿಳಿಯಿರಿ. ಆಗ ನೀವು ಅವನನ್ನು ಹೊಂದುವಿರಿ."

(**ಶ್ರೀರಾಮಕೃಷ್ಣ ಉಪದೇಶಾಮೃತ, ಪು. ೧೭೮, ೧೭೯**)

**ಯಾ**ವುದಾದರೂ ಒಂದು ಭಾವವನ್ನು ದೃಢವಾಗಿ ನಂಬಿ, ನೀವು ಅವನನ್ನು ನಿಮ್ಮವನನ್ನಾಗಿ ಮಾಡಿಕೊಳ್ಳಬೇಕು. ಆಗ ಮಾತ್ರ ಅವನು ನಿಮ್ಮ ಪ್ರಾರ್ಥನೆಗಳನ್ನು ಸಲ್ಲಿಸಬೇಕಾಗುವುದು. ಇಬ್ಬರು ವ್ಯಕ್ತಿಗಳಿಗೆ ಆಗತಾನೆ ಪರಿಚಯವಾದಾಗ ಅವರು ಮಾತನಾಡುವಾಗ ಎಲ್ಲಾ ನಿಯಮಗಳನ್ನೂ ಅನುಸರಿಸುವರು. ನಿಕಟತೆ ಹೆಚ್ಚಿದಂತೆಲ್ಲಾ ತೋರಿಕೆಯ ಗೌರವವೆಲ್ಲಾ ಮಾಯವಾಗುವುದು. ಇಬ್ಬರೂ ಬಹಳ ಸದರದಿಂದ ಮಾತನಾಡುವರು. ಇದರಂತೆಯೆ ನಾವು ದೇವರೊಂದಿಗೆ ಅತ್ಯಂತ ಹತ್ತಿರದ ಸಂಬಂಧವನ್ನು ಇಟ್ಟುಕೊಂಡಿರಬೇಕು. ಜಾರೆಗೆ ತನ್ನ ಉಪಪತಿಯ ಸಮೀಪದಲ್ಲಿ ಪ್ರಾರಂಭದಲ್ಲಿ ತುಂಬಾ ನಾಚಿಕೆಯಾಗುವುದು. ತುಂಬ ಜೋಪಾನವಾಗಿ ಅವಳ ಪ್ರೀತಿಯನ್ನು ರಹಸ್ಯವಾಗಿಟ್ಟಿರುವಳು. ಆದರೆ ಅವಳ ಪ್ರೇಮ ಮಾಗಿದ ಮೇಲೆ ಇಂತಹ ನಾಚಿಕೆ ಮಾಯವಾಗುವುದು. ಬಹಿರಂಗವಾಗಿ ಮನೆಯನ್ನು ತೊರೆದು ತನ್ನ ಪ್ರಿಯನೊಂದಿಗೆ ಅಲೆಯುವಳು. ಅನಂತರ ಅವನಿಗೆ ಇವಳ ಮೇಲೆ ಪ್ರೀತಿ ಇಲ್ಲದೆ ಇದ್ದರೆ, ಅವನ ಕತ್ತನ್ನು ಹಿಡಿದುಕೊಂಡು, "ನಿನಗೋಸುಗ ನಾನು ಮನೆಬಿಟ್ಟೆ. ಈಗ ನನ್ನನ್ನು ರಕ್ಷಿಸದೆ ಇದ್ದರೆ ಬಿಡುವುದಿಲ್ಲ" ಎನ್ನುವಳು. (**ಶ್ರೀರಾಮಕೃಷ್ಣ ಉಪದೇಶಾಮೃತ, ಪು. ೧೭೯**)

# ಗುರುವಿನ ಆವಶ್ಯಕತೆ – ಅವತಾರದ ಕೃಪೆ

ಸ್ವಾಮಿ ಗಿರಿಜಾತ್ಮಾನಂದ

ಆಧ್ಯಾತ್ಮಿಕ ಜೀವನದಲ್ಲಿ ಗುರುವಿನ ಪಾತ್ರ ನಿರ್ಣಾಯಕವಾದುದು. ಗುರುವಿನ ಮಹತ್ವ ಮತ್ತು ಜಗದ್ಗುರುವಾದ ಅವತಾರವು ತೋರುವ ಅಪಾರಕೃಪೆ – ಇವುಗಳ ಬಗ್ಗೆ ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಕಂಡುಬರುವ ಹಲವಾರು ಅಂಶಗಳನ್ನು ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಜಗತ್ತು ವೈವಿಧ್ಯಮಯ. ನಮ್ಮ ಸುತ್ತಮುತ್ತಲ ಜನರ ಮನದ ಆಸೆ–ಆಕಾಂಕ್ಷೆಗಳಲ್ಲಿಯೂ ಅದೆಷ್ಟು ವಿಭಿನ್ನತೆಯಿದೆ! ಈ ಆಸೆಗಳ ಈಡೇರಿಕೆಗೆ ಅವರು ಕೈಗೊಳ್ಳುವ ವಿಧಾನಗಳೂ ಹಲವು. ಹಣದ ಗಳಿಕೆಗಾಗಿ, ವಿದ್ಯೆಯ ಗಳಿಕೆಗಾಗಿ, ಹೆಸರು–ಕೀರ್ತಿಗಳ ಗಳಿಕೆಗಾಗಿ ಮನುಷ್ಯರು ದುಡಿಯುತ್ತಿದ್ದಾರೆ. ಆದರೆ ಅಲ್ಲಲ್ಲಿ ಕೆಲವರಾದರೂ ಈ ಅಶಾಂತತೆಯ ಜನ ಜೀವನದ ಹಿಂದೆ ಇರುವ ಏಕತೆಯನ್ನು ಹುಡುಕುವ ಶಾಂತ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗೆಯ ಪ್ರಯತ್ನಶೀಲರನ್ನೇ ಮುಮುಕ್ಷುಗಳೆನ್ನಬಹುದು. ಇವರೇ ಮುಕ್ತಾಭಿಲಾಷಿಗಳು ಅಥವಾ ಆಧ್ಯಾತ್ಮಿಕ ಸತ್ಯಾನ್ವೇಷಕರು.

ಭಾರತದಲ್ಲಿ ಜನರು ಕೇವಲ ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸುವ ಜೀವನವನ್ನು ನಡೆಸದೆ, ಇಂದ್ರಿಯಾತೀತವಾದ ಆಧ್ಯಾತ್ಮಿಕ ಸತ್ಯಗಳನ್ನು ಅನ್ವೇಷಿಸುವುದರಲ್ಲಿ ಬಹು ಪ್ರಾಚೀನ ಕಾಲದಿಂದಲೂ ಯಶಸ್ವಿಗಳಾಗಿದ್ದಾರೆ. ಧರ್ಮವೇ ಭಾರತೀಯರ ಪ್ರಥಮ ಆದ್ಯತೆಯಾಗಿದೆ. ಧರ್ಮದ ಎಲ್ಲ ಶಾಖೋಪಶಾಖೆಗಳಲ್ಲೂ ಅನ್ವೇಷಣೆಗಳು ನಡೆದು, ಅನ್ವೇಷಿಸಲು ಮತ್ತೇನೂ ಉಳಿದಿಲ್ಲವೆಂಬಷ್ಟು ಗರಿಷ್ಠ ಮಟ್ಟವನ್ನು ಅದು ತಲುಪಿದೆ. ಕಾಲಕಾಲಕ್ಕೆ ಆವಿರ್ಭವಿಸಿದ ಅವತಾರಪುರುಷರು, ಆಚಾರ್ಯರು, ಸಾಧು–ಸಂತರು ತಮ್ಮ ಅನುಭವಜನ್ಯವಾದ ಆಧ್ಯಾತ್ಮಿಕ ಜ್ಞಾನವನ್ನು ಜಗತ್ತಿಗೆ ಮುಕ್ತವಾಗಿ ಧಾರೆಯೆರೆದಿದ್ದಾರೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತಭೂಮಿಯಲ್ಲಿ ಮತ್ತೊಬ್ಬ ಮಹಾಪುರುಷರ ಆಗಮನವಾಯಿತು. ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಕಾಮಾರಪುಕುರವೆಂಬ ಗ್ರಾಮವೊಂದರ ಬಡಬ್ರಾಹ್ಮಣ ಕುಟುಂಬವೊಂದರಲ್ಲಿ ಜನ್ಮತಾಳಿದ ಅವರು, ಈ ಹಿಂದಿನ ಎಲ್ಲ ಅವತಾರಪುರುಷರ, ಸಾಧುಸಂತರ ನೈಜ ಪ್ರತಿನಿಧಿಯೇ ಆಗಿದ್ದರು. ವೈಜ್ಞಾನಿಕ ಜಗತ್ತಿನ ಬೆಡಗು ಬಿನ್ನಾಣಗಳ ಮಧ್ಯದಲ್ಲಿಯೂ ಸನಾತನ ಧರ್ಮತತ್ತ್ವಗಳು ಜೀವಂತವಾಗಿರುವಂತೆ ಮಾಡಿದರು. ಅವರೇ ಶ್ರೀರಾಮಕೃಷ್ಣ ಪರಮಹಂಸರು.



ದ್ವೈತಭಾವದಿಂದ ಮುಂದುವರೆದು ಅದ್ವೈತದ ನಿರಾಕಾರ ತತ್ತ್ವದವರೆಗಿನ ಎಲ್ಲ ಸ್ತರಗಳಲ್ಲಿಯೂ ಸ್ವಯಂ ತಾವೇ ಆಧ್ಯಾತ್ಮಿಕ ಸಾಧನೆಗೈದು, ಎಲ್ಲ ಧಾರ್ಮಿಕ ಸಂಶಯಗಳಿಗೂ ಅವರು ಪರಿಹಾರವನ್ನು ಕಂಡುಕೊಂಡರು. “ಮನುಷ್ಯ ಜೀವನದ ಪರಮೋದ್ದೇಶವೇ ಭಗವಂತನನ್ನು ದರ್ಶಿಸುವುದಾಗಿದೆ” ಎನ್ನುತ್ತಾ ಮನುಷ್ಯ ಜೀವನಕ್ಕೆ ಒಂದು ನಿಶ್ಚಿತ ಗುರಿಯನ್ನು ನೀಡಿದರು. ಹಿಂದೂಧರ್ಮವಲ್ಲದೆ ಜಗತ್ತಿನ ಇತರ ಧರ್ಮಗಳಾದ ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳ ಮೂಲಕವೂ ಸಾಧನೆಗೈದು, ‘ಎಷ್ಟು ಮತಗಳೋ ಅಷ್ಟು ಪಥಗಳು’ ಎಂದು ಹೇಳಿ, ಮಾನವೀಯ ಸಂಬಂಧಗಳನ್ನು ಬೆಸೆಯುವುದರೊಂದಿಗೆ, ಮತೀಯ ಕಲಹಗಳನ್ನೂ ಬಹುಮಟ್ಟಿಗೆ ದೂರ ಮಾಡಿದರು.

ಈ ಮಹಾಪುರುಷರ ಮಾತುಗಳು ಕೇವಲ ಒಮ್ಮೆ ಕೇಳಿ ಮರೆತುಬಿಡುವಂತಹವಲ್ಲ. ಮತ್ತೆ ಮತ್ತೆ ಕೇಳಬೇಕಾದ, ಕೇಳುತ್ತಲೇ ಇರುವಂತೆ ಮನುಷ್ಯ ಜೀವಿಗಳನ್ನು ಹಿಡಿದಿಡುವ ಶಕ್ತಿಯುಳ್ಳವುಗಳು. ಅವುಗಳನ್ನು ಪುಸ್ತಕದಲ್ಲಿ ಬರೆದು ದಾಖಲಿಸಿಕೊಳ್ಳುವ ಪ್ರಯತ್ನವನ್ನು ಹಲವರು ಮಾಡಿದರು. ಆದರೆ ಆ ವೇದಸದೃಶ ಮಾತುಗಳನ್ನು ಲಿಖಿತ ರೂಪದಲ್ಲಿ ದಾಖಲಿಸಲೆಂದೇ ಮಹೇಂದ್ರನಾಥ ಗುಪ್ತರ ಆಗಮನವಾಗಿತ್ತು. ಬಂಗಾಳಿ ಭಾಷೆಯಲ್ಲಿ ಅವರು ಬರೆದ ಪುಸ್ತಕಕ್ಕೆ ‘ಶ್ರೀ ಶ್ರೀರಾಮಕೃಷ್ಣ ಕಥಾಮೃತ’ ಎಂದು ಹೆಸರು. ಆ ಕೃತಿ ಇಂದು ಜಗತ್ತಿನ ಬಹುತೇಕ ಭಾಷೆಗಳಲ್ಲಿ ವಿವಿಧ ಶಿರೋನಾಮೆಗಳಲ್ಲಿ ಲಭ್ಯವಿದೆ. ಆ ಮಹಾನ್‌ಕೃತಿಯು ಕನ್ನಡ ಭಾಷೆಯಲ್ಲಿ ‘ಶ್ರೀರಾಮಕೃಷ್ಣ ವಚನವೇದ’ ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ.

ತಮ್ಮ ಜೀವಿತದ ಕೊನೆಯ ದಶಕದಲ್ಲಿ ಶ್ರೀರಾಮಕೃಷ್ಣರು ತಮ್ಮಲ್ಲಿಗೆ ಬಂದ ಆಧ್ಯಾತ್ಮಿಕ ಪಿಪಾಸುಗಳಿಗೆ ನೀಡಿದ ಮಾರ್ಗದರ್ಶನದ ಮಾತುಗಳು ಇಂದಿನ ಯುಗಕ್ಕೆ ಹೊಸ ದಿಗ್ದರ್ಶನವನ್ನೇ ಮಾಡಿವೆ. ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಪಟ್ಟ ಹಲವಾರು ವಿಷಯಗಳನ್ನು ಸರಳ ಮಾತುಗಳಿಂದ, ಸುಲಭವಾದ ಉಪಮಾನಗಳ ಮೂಲಕ, ಎಲ್ಲರೂ ಅನುಸರಿಸಲು ಸಾಧ್ಯವಾಗುವ ರೀತಿಯಲ್ಲಿ ಶ್ರೀರಾಮ ಕೃಷ್ಣರು ತಿಳಿಯಪಡಿಸಿದ್ದಾರೆ. ಅವರು ಗುರುವಿನ ಆವಶ್ಯಕತೆ ಮತ್ತು ಅವತಾರದ ಕೃಪೆಯ ಸಂಬಂಧವಾಗಿ ಹೇಳಿರುವ ಮಾತುಗಳನ್ನು ಕುರಿತು ಚಿಂತನೆ ನಡೆಸಿ, ಆಧ್ಯಾತ್ಮಿಕ ಲಾಭವನ್ನು ಹೊಂದುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

**ಗುರುವಿನ ಆವಶ್ಯಕತೆ :** ಆಧ್ಯಾತ್ಮಿಕ ಜೀವನವೆಂಬುದು 'ಕತ್ತಿಯ ಹರಿತವಾದ ಅಂಚಿನ ಮೇಲೆ ನಡೆಯುವಷ್ಟು ದುಸ್ಸಾಧ್ಯ' ಎನ್ನುತ್ತದೆ ಕಠೋಪನಿಷತ್ತು. ಸೂಕ್ಷ್ಮಾತಿಸೂಕ್ಷ್ಮವಾದ ಆ ಮಾರ್ಗದಲ್ಲಿ ನಡೆಯುವ ಶಿಷ್ಯನಿಗೆ ಗುರುವಾಕ್ಯವೇ ಸಕಲ ಆಧಾರ. ಗುರುಪ್ರೇಮ ಮತ್ತು ಗುರುವಿನ ಮಾತಿನ ಮೇಲಿನ ವಿಶ್ವಾಸ ಶ್ರದ್ಧೆಗಳ ತೀವ್ರತೆಯೇ ಅವನನ್ನು ಗುರಿಗೆ ಸೇರಿಸುವ ಪ್ರೇರಕ ಶಕ್ತಿಗಳಾಗಿರುತ್ತವೆ. ಸ್ವಯಂ ಶ್ರೀರಾಮಕೃಷ್ಣರು ಯಾವ ಗುರುವಿನ ಮಾರ್ಗದರ್ಶನವೂ ಇಲ್ಲದೆ ಕಾಳೀಮಾತೆಯನ್ನು ಸಾಕ್ಷಾತ್ಕರಿಸಿಕೊಂಡರು. ಅವರೆನ್ನುತ್ತಾರೆ, "ಯಾರು ಸತ್ಯವಾಗಿ ಹೃತ್ಪೂರ್ವಕ ಪ್ರಾರ್ಥನೆ ಮತ್ತು ಅತಿ ನಿಕಟವಾದ ವ್ಯಾಕುಲತೆಯಿಂದ ದೇವರ ಹತ್ತಿರ ತಾವೇ ಹೋಗಬಲ್ಲರೋ ಅವರಿಗೆ ಯಾವ ಗುರುಗಳೂ ಬೇಕಾಗಿಲ್ಲ. ಆದರೆ ಮಾನವನಲ್ಲಿ ಅಂತಹ ಅತಿ ನಿಕಟ ವ್ಯಾಕುಲತೆ ಬಹಳ ಅಪರೂಪ. ಆದ ಕಾರಣವೇ ಗುರುವಿನ ಅವಶ್ಯಕತೆ."

ಶ್ರೀರಾಮಕೃಷ್ಣರು ಯಾವ ಗುರುವಿನ ಸಹಾಯವೂ ಇಲ್ಲದೆ ಜಗನ್ಮಾತೆಯನ್ನು ಸಾಕ್ಷಾತ್ಕರಿಸಿಕೊಂಡರು. ತದನಂತರ ಗುರುವಾಕ್ಯಕ್ಕೆ ಅನುಗುಣವಾಗಿ ಸಾಧನೆಗೈದು ತಮಗಾದ ಎಲ್ಲ ಆಧ್ಯಾತ್ಮಿಕ ಅನುಭವಗಳೂ ಕೇವಲ ಭ್ರಮೆಯಲ್ಲ, ಬದಲಾಗಿ ಜೀವಂತ ಸತ್ಯಗಳು ಎಂಬುದನ್ನು ಮನಗಂಡರು. ಶಿಷ್ಯನಾದವನು ಗುರುವಿನ ಉಪದೇಶದ ಮೇಲಿಡುವ ಶ್ರದ್ಧೆಯೇ ಅವನ ಆಧ್ಯಾತ್ಮಿಕ ಉನ್ನತಿಯ ಸಾರ ಸರ್ವಸ್ವ ಎಂಬುದು ಶ್ರೀರಾಮಕೃಷ್ಣರ ದಿವ್ಯಜೀವನದಿಂದ ಮನದಟ್ಟಾಗುತ್ತದೆ. ಭೈರವಿ ಬ್ರಾಹ್ಮಣಿಯು ನಿರ್ದೇಶಿಸಿದ ರೀತಿಯಲ್ಲಿಯೇ ನಡೆದು ತಂತ್ರದ ಎಲ್ಲ ಹಂತದ ಸಾಧನೆಗಳನ್ನು ಮಾಡಿ ಮುಗಿಸಿ, ನಿರೀಕ್ಷೆಗಿಂತಲೂ ಹೆಚ್ಚಿನ ಯಶಸ್ಸನ್ನು ಪಡೆದರು. ಹಾಗೆಯೇ ತೋತಾ ಪುರಿಯ ಮಾರ್ಗದರ್ಶನದಲ್ಲಿ ಅತ್ಯಂತ ಸರಳ ಶ್ರದ್ಧೆಯನ್ನು ತೋರಿ, ನಾಲ್ಕೇ ದಿನಗಳಲ್ಲಿ ಅದ್ವೈತದ ನಿರಾಕಾರ ತತ್ತ್ವದಲ್ಲಿ ಮನಸ್ಸನ್ನು ಲಯಗೊಳಿಸಿ ತಮ್ಮ ಗುರುವೇ ಮೂಕವಿಸ್ಮಿತರಾಗುವಂತೆ ಮಾಡಿದರು.

ಗುರುವಾಕ್ಯದಲ್ಲಿಡಬೇಕಾದ ಶ್ರದ್ಧೆಯನ್ನು ಕುರಿತು ಶ್ರೀರಾಮಕೃಷ್ಣರು ಹೇಳುತ್ತಿದ್ದ ಕಥೆಯೊಂದು ಹೀಗಿದೆ: ಒಬ್ಬಳು ಹಾಲು ಮಾರುವ ಹೆಂಗಸು ಗುರುಗಳೊಬ್ಬರ ಮನೆಗೆ ಹಾಲು ಒದಗಿಸುತ್ತಿದ್ದಳು. ಅವಳು ನದಿ ದಾಟಿ ಹೋಗಬೇಕಾಗಿದ್ದುದರಿಂದ ಕೆಲವು ದಿನ ಹಾಲು ತರುವುದು ತಡವಾಗುತ್ತಿತ್ತು. ಆಗ ಬೇಸರಗೊಂಡ ಗುರುಗಳು ತಡವಾದುದಕ್ಕೆ ಕಾರಣವನ್ನು ಕೇಳಿದರು. ಆಕೆ ತಾನು ಪ್ರತಿ ದಿನವೂ ದೋಣಿಯವರು ದೊರೆತಾಗ ಮಾತ್ರ ನದಿ ದಾಟಿ ಬರಬೇಕಾಗಿರುವುದೆಂದು ತನ್ನ ಅಸಹಾಯಕ ಪರಿಸ್ಥಿತಿಯನ್ನು ತಿಳಿಸಿದಳು. ಆಗ ಗುರುಗಳೆಂದರು, "ನೋಡಮ್ಮ, ದೇವರ ನಾಮವನ್ನು ಜಪಿಸಿದರೆ ಈ ಭವಸಾಗರವನ್ನೇ ದಾಟಿಬಿಡಬಹುದು. ಈ ಸಣ್ಣ ನದಿಯನ್ನು ನೀನು ದಾಟಲಾರೆಯಾ?" ಇದನ್ನು ಕೇಳಿದ ಅವಳು ಅತ್ಯಂತ ಶ್ರದ್ಧೆಯಿಂದ ಗುರುವಾಕ್ಯವನ್ನು ಕುರಿತು ಚಿಂತಿಸಿದಳು. ಆಕೆ ಮತ್ತೆಂದೂ ತಡವಾಗಿ ಬಾರದ್ದನ್ನು ಕಂಡು ಗುರುಗಳು ಕುತೂಹಲದಿಂದ ಪ್ರಶ್ನಿಸಿದರು, "ಇತ್ತೀಚೆಗೆ ನೀನು ಸಮಯಕ್ಕೆ ಸರಿಯಾಗಿ ಹಾಲನ್ನು ತರುತ್ತಿರುವೆಯಲ್ಲಾ? ಏನು ಸಮಾಚಾರ ? ಈಗ ದೋಣಿಯವರು ಸಕಾಲಕ್ಕೆ ಸಿಗುತ್ತಿದ್ದಾರೆಯೆ?" ಆಗ ಆಕೆ ನಸುನಕ್ಕು ನುಡಿದಳು, "ಇಲ್ಲ ಗುರುಗಳೇ, ಎಲ್ಲವೂ ತಾವು ಹೇಳಿಕೊಟ್ಟ ದೇವರನಾಮದ ಮಹಿಮೆ. ದೇವರನಾಮವನ್ನು ಉಚ್ಚರಿಸುತ್ತಾ ಸುಲಭವಾಗಿ ನೀರಿನ ಮೇಲೆ ನಡೆದು ಬಂದುಬಿಡುತ್ತಿದ್ದೇನೆ" ಇದನ್ನು ಕೇಳಿ ಗುರುಗಳು ತಮ್ಮ ಕಿವಿಗಳನ್ನೇ ನಂಬದಾದರು. ಅದನ್ನು ತಾವು ಪರೀಕ್ಷಿಸಿ ನೋಡುವ ಸಲುವಾಗಿ ಅವಳೊಡನೆ ನದೀತೀರಕ್ಕೆ ಬಂದರು. ಅವಳು ಸಹಜವಾಗಿ ನೀರಿನ ಮೇಲೆ ನಡೆಯುತ್ತ, ಗುರುಗಳನ್ನು ಆಹ್ವಾನಿಸಿದಳು. ಗುರುಗಳಿಗೆ ಅದು ಸಾಧ್ಯವಾಗಲಿಲ್ಲ, ನೀರಿನಲ್ಲಿ ಮುಳುಗುವುದು ತಪ್ಪಲಿಲ್ಲ !

ಗುರುವಿನಿಂದ ಉಪದೇಶವನ್ನು ಪಡೆಯುವುದರ ಆವಶ್ಯಕತೆಯನ್ನು ಶ್ರೀರಾಮಕೃಷ್ಣರು ಒಂದು ಸರಳ ಉದಾಹರಣೆಯ ಮೂಲಕ ತಿಳಿಸುತ್ತಾರೆ. "ಗುರುವಿನಿಂದ ಉಪದೇಶ ಪಡೆಯಬೇಕು. ಒಬ್ಬ ಒಮ್ಮೆ ಬಾಣಲಿಂಗಕ್ಕಾಗಿ ಹುಡುಕುತ್ತಿದ್ದ. ಯಾರೋ ಒಬ್ಬ ಹೇಳಿದ, 'ಆ ನಿರ್ದಿಷ್ಟ ನದಿಯ ಹತ್ತಿರ ಹೋಗು. ಅಲ್ಲಿ ಒಂದು ಮರ ಕಣ್ಣಿಗೆ ಬೀಳುತ್ತದೆ. ಆ ಮರದ ಹತ್ತಿರ ಒಂದು ಸುಳಿಯನ್ನು ನೋಡು ತ್ತೀಯೆ. ಅದರಲ್ಲಿ ಮುಳುಗು ಹಾಕಿ ನೋಡು. ಆಗ ನಿನಗೆ ಬಾಣಲಿಂಗ ದೊರಕುತ್ತದೆ.' ಆದ್ದರಿಂದಲೇ ನಾನು ಹೇಳುವುದು, ಗುರು ವಿನಿಂದ ಉಪದೇಶ ಪಡೆಯಬೇಕು ಎಂಬುದಾಗಿ."

ನಮಗೆ ಯಾವುದಾದರೊಂದನ್ನು ಕಲಿಸುವ ಎಲ್ಲರೂ ಗುರುಗಳೇ ಸರಿ. ಆದರೆ ಒಂದು ವಿಷಯವನ್ನು ಕಲಿಯಲು ಒಬ್ಬ ಗುರು ವನ್ನೇ ಏಕೆ ಅವಲಂಬಿಸಬೇಕು ಎಂಬುದಕ್ಕೆ ಶ್ರೀರಾಮಕೃಷ್ಣರೆನ್ನುತ್ತಾರೆ, "ಒಂದು ಹೊಸ ದೇಶಕ್ಕೆ ಹೋದಾಗ ದಾರಿ ತೋರಿಸುವವನು ಹೇಳಿದಂತೆ ಕೇಳಬೇಕು. ಎಲ್ಲರ ಬುದ್ಧಿವಾದವನ್ನು ಕೇಳುತ್ತಿದ್ದರೆ ಕೊನೆಗೆ ದುರವಸ್ಥೆಗೆ ಈಡಾಗಬೇಕಾಗುವುದು. ಆದಕಾರಣ ದೇವರನ್ನು ಕಾಣುವ ಮಾರ್ಗದಲ್ಲಿ ಅದಕ್ಕೆ ದಾರಿ ಗೊತ್ತಿರುವ ಒಬ್ಬ ಗುರುವಿನ ಮಾತನ್ನು ಮಾತ್ರ ಸಂಪೂರ್ಣವಾಗಿ ಅವಲಂಬಿಸಬೇಕು."